# ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ

ಸಿ.ಸಿ. 1485/2024

ಪ್ರಮಾಣ ವಚನ ಬೋಧಿಸಲಾಯಿತು

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | ರಾಜೇಗೌಡ | ಚಾಸಾ- 2 |
| ತಂದೆ **ಹೆಸರು** | ಃ | ಲಕ್ಕೇಗೌಡ | ಪ್ರಾಸಾ- 2 |
| **ವಯಸ್ಸು** | ಃ | 72 ವರ್ಷ | |
| **ಉದ್ಯೋಗ** | ಃ | ವ್ಯವಸಾಯ | |
| **ವಾಸ** | | ಪೋತನಹಳ್ಳಿ | ದಿನಾಂಕಃ 28.11.2025 |

**ಮುಖ್ಯ ವಿಚಾರಣೆ ಃ- ಎ.ಪಿ.ಪಿ. ಯವರಿಂದ**

ಆರೋಪಿ ಗೊತ್ತು. ಚಾಸಾ-**1** ನನ್ನ ಸೊಸೆ, ಚಾಸಾ-**3** ರಿಂದ **5** ಗೊತ್ತು. ಒಂದು ವರ್ಷದ ಹಿಂದೆ ನಮ್ಮ ಮನೆಯ ಬಳಿ ಆರೋಪಿ ಮತ್ತು ನನ್ನ ಮಗ ಇದ್ದು, ನನ್ನ ಮಗ ಮಣ್ಣನ್ನು ತಗೆಸಿ ಮನೆಗೆ ಬಂದಿದ್ದು ನಂತರ ಆರೋಪಿ ಆ ಸ್ಥಳಕ್ಕೆ ಹೋಗಿದ್ದು ಏಕೆ ಇಲ್ಲಿ ಮಣ್ಣನ್ನು ತೆಗೆಸಿದ್ದಿಯಾ ಎಂದು ಕೇಳಿದ್ದು ಮಣ್ಣು ಕುಸಿದರೆ ಕಲ್ಲನ್ನು ಕಟ್ಟಿಕೊಡುತ್ತೇನೆ ಎಂದು ನನ್ನ ಮಗ ಆರೋಪಿಗೆ ಹೇಳಿದರು. ನಂತರ ನಾನು ಸ್ಥಳಕ್ಕೆ ಹೋಗಿದ್ದು ಆಗ ಆರೋಪಿಯು ನನ್ನನ್ನು ಕೆಳಕ್ಕೆ ಕೆಡವಿ ಹೊಡೆದಿರುತ್ತಾನೆ. ನಂತರ ನನ್ನ ಮಗ ಸ್ಥಳಕ್ಕೆ ಬಂದಿದ್ದು ಆಗ ಆರೋಪಿಯು ನನ್ನ ಮಗನನ್ನು ತಳ್ಳಿರುತ್ತಾನೆ. ಆಗ ನನ್ನ ಮಗ ಹಿಂದಕ್ಕೆ ಬಿದಿದ್ದು ಆಗ ಆರೋಪಿ ಹೊಡೆದು ಕಾಲಿನಿಂದ ನನ್ನ ಮಗನನ್ನು ತುಳಿದಿರುತ್ತಾನೆ. ನನ್ನ ಮಗನಿಗೆ ಸ್ಥಳದಲ್ಲಿಯೇ ಪ್ರಾಣ ಹೋಗಿರುತ್ತದೆ.

ಸಾಕ್ಷಿಯು ಮಹಜರ್ ನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-**3** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-**3**(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಮ್ಮ ಊರಿನಲ್ಲಿ ಮಹಜರ್ ಸಮಯದಲ್ಲಿ ಮಾಡಿರುತ್ತೇನೆ. ನಿಪಿ-**3** ರಲ್ಲಿ ಇರುವ ವಿಚಾರ ಗೊತ್ತಿಲ್ಲ. ನಿಪಿ-**3**ಕ್ಕೆ ನನ್ನ ಜೊತೆ ನಮ್ಮ ಊರಿನವರು ಸಹಿ ಮಾಡಿರುತ್ತಾರೆ. ನಾನು ಪೊಲೀಸ್ ರವರಿಗೆ ಯಾವುದೇ ಮರುಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**4** ಎಂದು ಗುರುತಿಸಲಾಯಿತು. ಅದನ್ನು ಮಹಜರ್ ಕಾಲದಲ್ಲಿ ತೆಗೆಯಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನುರಿತ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ.** ದಾಖಲೆಗಳನ್ನು ಪರಿಶೀಲಿಸಿ **ಸಾಕ್ಷಿಯನ್ನು** ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ **ಪಾಟೀ ಸವಾಲು ಮಾಡಲು ಅನುಮತಿ**ಸಲಾಯಿತು**)**

**ಪಾಟೀ ಸವಾಲು ಃ-** ಶ್ರೀಮತಿ ಎ.ಪಿ.ಪಿ ರವರಿಂದ

ದಿಃ **17.08.2024** ರಂದು ನೀಡಿರುವ ಹೇಳಿಕೆಯಲ್ಲಿ ದಿಃ **16.08.2024** ರಂದು ಘಟನೆ ನಡೆದಿರುತ್ತದೆ ಎಂದರೆ ಸಾಕ್ಷಿಯು ನನಗೆ ದಿನಾಂಕ ಗೊತ್ತಿಲ್ಲ ಎಂದು ಹೇಳಿದರು. ಆಗ ಸಮಯ **6.30** ಸಂಜೆ ಆಗಿರುತ್ತದೆ ಎಂದರೆ ಸರಿ. ಆರೋಪಿ ಹಾಗೂ ಚಾಸಾ-**3** ಹಾಗೂ ನನ್ನ ಮಗ ಜಗಳ ಮಾಡುತ್ತಿದ್ದ ವಿಚಾರಕ್ಕೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಹೇಳಿಕೆಯಲ್ಲಿ ನಾನು ಮತ್ತು ನನ್ನ ಮಗ ಜಮೀನಿನಲ್ಲಿ ಇಕ್ಕಲ್ಲನ್ನು ತೆಗೆಯಬೇಕಾದರೆ ಆರೋಪಿ ಏಕಏಕಿ ಜಗಳ ತೆಗೆದು ನನಗೆ ಕೈನಿಂದ ಹೊಡೆದ ಎಂದರೆ ಸರಿ. ಆಗ ನಾನು ಕಲ್ಲನ್ನು ಕಟ್ಟಿಸಿಕೊಡುತ್ತೇನೆ ಎಂದು ನಾನು ಹೇಳಿದ್ದೆ ಎಂದರೆ ಸರಿ. ಚಾಸಾ-**3** ರವರು ಅಲ್ಲಿಗೆ ಬಂದರು ಎಂದರೆ ಸರಿ. ಅವರು ನನ್ನ ಅಣ್ಣನಿಗೆ ಯಾಕೆ ಹೊಡೆಯುತ್ತೀಯಾ ಎಂದು ಹೇಳಿದಾಗ ಚಾಸಾ-**3**ರವರಿಗೂ ಆರೋಪಿ ಅವಾಚ್ಯ ಶಬ್ದದಿಂದ ಬೈದು ಅಲ್ಲೇ ಬಿದಿದ್ದ ಕಬ್ಬಿಣದ ಪೈಪ್ ನಿಂದ ಹೊಡೆದಿರುತ್ತಾರೆ ಎಂದರೆ ಸರಿ. ಆಗ ಚಾಸಾ-**1** ಮತ್ತು ನನ್ನ ಮಗ ಜಗಳ ಬಿಡಿಸಲು ಬಂದರು ಎಂದರೆ ಸರಿ. ಆಗ ಆರೋಪಿಯು ನನ್ನ ಮಗನಿಗೆ ಕೈಮುಷ್ಟಿಯಿಂದ ಅವರ ಎದೆಗೆ ಹೊಡೆದರು ಎಂದರೆ ಸರಿ. ಆಗ ನನ್ನ ಮಗ ಅಲ್ಲೇ ಬಿದ್ದು ಪ್ರಜ್ಞೆ ಕಳೆದುಕೊಂಡರು ಎಂದರೆ ಸರಿ.

ನನ್ನ ಮಗನನ್ನು ನಾನು ಮತ್ತು ಚಾಸಾ-**1, 5** ರವರು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೇವು ಎಂದರೆ ಸಾಕ್ಷಿಯು ನಾನು ಆಸ್ಪತ್ರೆಗೆ ಬಂದಿರುವುದಿಲ್ಲ ಬೇರೆಯವರು ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಆಗ ವೈದ್ಯರು ಪರೀಕ್ಷೆ ಮಾಡಿ ನನ್ನ ಮಗ ಮರಣ ಹೊಂದಿರುತ್ತಾರೆ ಎಂದು ಹೇಳಿದರು ಎಂದರೆ ಸಾಕ್ಷಿಯು ನಾನು ಆಗ ಮನೆಯಲ್ಲಿ ಇದ್ದೆ ಎಂದು ಹೇಳಿದರು. ನನಗೆ ಚಿಕಿತ್ಸೆ ಪಡೆಯುವಂತಹ ಗಾಯಗಳು ಆಗದೇ ಇರುವುದರಿಂದ ನಾನು ಚಿಕಿತ್ಸೆ ಪಡೆದಕೊಂಡಿಲ್ಲ ಎಂದರೆ ಸರಿ. ಸದರಿ ವಿಚಾರವಾಗಿ ಚಾಸಾ-**1**ರವರು ದೂರು ನೀಡಿರುತ್ತಾರೆ ಎಂದರೆ ಸರಿ.

ದಿಃ **17.08.2024** ರಂದು ಪೊಲೀಸ್ ರವರು ನಮ್ಮ ಮನೆಯ ಬಳಿಯ ಜಮೀನಿನಲ್ಲಿ ಮಹಜರ್ ಜರುಗಿಸಲು ಬಂದರು ಎಂದರೆ ಸರಿ. ಆಗ ನಾನು ಹಾಜರು ಮಾಡಿದ್ದ ಒಂದು ಕೋಲನ್ನು ಪೊಲೀಸ್ ರವರು ಅಮಾನತ್ತು ಪಡಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಆಗ ಸಮಯ **11.45** ರಿಂದ **12.45** ಆಗಿರುತ್ತದೆ ಎಂದರೆ ಆಗಿರಬಹುದು.

ಆ ದಿನ ನನ್ನ ಜೊತೆ ಚಾಸಾ-**8, 9** ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಂತರ ದಿಃ **14.11.2024** ರಂದು ಪೊಲೀಸ್ ರವರಿಗೆ ಮರು ಹೇಳಿಕೆ ನೀಡಿದ್ದು ಅದರಲ್ಲಿ ನನಗೆ ಮತ್ತು ಚಾಸಾ-**3**ರವರಿಗೂ ಆರೋಪಿ ತಳ್ಳಾಟಾ ಹಾಗೂ ನೂಕಾಟ ಮಾಡಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ-**1** ಮತ್ತು ನನ್ನ ಮಗ ಬಂದಿದ್ದು ನನ್ನ ಮಗ ಅಲ್ಲೇ ಬಿದಿದ್ದ ತೆಂಗಿನ ಕಾಯಿ ಮಟ್ಟೆ ಮೇಲೆ ಬಿದ್ದರು ಎಂದರೆ ಸರಿ. ಆಗ ನನ್ನ ಮಗ ಮೇಲೆ ಎದ್ದೇಳಲಿಲ್ಲ ಎಂದರೆ ಸರಿಯಲ್ಲ ಎಂದು ನುಡಿದು ಆರೀತಿ ಕಾಯಿ ಮಟ್ಟೆ ಮೇಲೆ ಬಿದ್ದ ನಂತರ ನನ್ನ ಮಗ ಮೇಲೆ ಎದಿದ್ದು ಆಗ ಆರೋಪಿಯು ನನ್ನ ಮಗನ ಕೊರಳ ಪಟ್ಟಿ ಹಿಡಿದು ಹಿಂದಕ್ಕೆ ನೂಕಿದ್ದು ನನ್ನ ಮಗನ ತಲೆಗೆ ಬಾಗಿಲಿನ ಪಟ್ಟಿ ತಾಗಿ ಸ್ಥಳದಲ್ಲಿ ಮರಣ ಹೊಂದಿರುತ್ತಾರೆ ಎಂದು ಹೇಳಿದರು. ಈ ಮೊದಲು ಹೃದಯ ಸಂಬಂಧ ಖಾಯಿಲೆ ಇತ್ತು ಎಂದರೆ ಸರಿ. ಆದಾ ಕಾರಣ ಅವರಿಗೆ ಸ್ಟಂಟ್ ನ್ನು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರಿಂದ ನನ್ನ ಮಗ ಸ್ಥಳದಲ್ಲಿ ಹೃದಯಘಾತವಾಗಿ ಅಲ್ಲಿಯೇ ಮರಣ ಹೊಂದಿರುತ್ತಾರೆ ಎಂದು ನನ್ನ ಮುಂದುವರೆದ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸಾಕ್ಷಿಯು ಹೊಡೆದಿದ್ದರಿಂದ ಮರಣ ಹೊಂದಿರುತ್ತಾರೆ ಎಂದು ಹೇಳಿದರು. ಸಾಕ್ಷಿಯು ಅಲಗಳೆದ ಹೇಳಿಕೆಯ ಭಾಗವನ್ನು ನಿಪಿ-**5** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿಯ ಪರ ವಕೀಲರು ಪಾಟೀಸವಾಲು ಮಾಡಲು ಸಮಯ ಕೇಳಿದ್ದರಿಂದ ಮುಂದೂಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ